67

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 60 ಎಲ್‌ಜಿಪಿ 2004.

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14-07-2005.

## ಸುತ್ತೋಲೆ

ಇದೇ ಸಮಸಂಖ್ಯೆಯ ದಿನಾಂಕ:26-11-2004ರ ಮತ್ತು ದಿನಾಂಕ:17-06-2005ರ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸುವುದು ಅಲ್ಲದೇ ಭೂ ಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಕೋರಿ ಬರುವ ಪ್ರಕರಣಗಳಲ್ಲಿ ಈ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

1) ಭೂ ಮಂಜೂರಾತಿಗೆ ಪ್ರಸ್ತಾಪಿಸಿದ ಕೆರೆ ಅಂಗಳ, ಗ್ರಾಮಠಾಣಾ, ಸ್ಮಶಾನ, ಗುಂಡುತೋಪು, ಗೋಮಾಳ ಮತ್ತು ಇತರೇ ವರ್ಗೀಕರಣದಲ್ಲಿನ ಜಮೀನುಗಳ ಮೂಲ ವಿಸ್ತೀರ್ಣ ಮುಂತಾದ ದಾಖಲೆಗಳ ಆಧಾರ ಸೂಚಿಸುವುದು.

2) ಮೂಲ ವಿಸ್ತೀರ್ಣದ ಸರ್ವೆ ನಂಬರಿನಲ್ಲಿ ನಕಾಶೆಯಲ್ಲಿ ಕಾಣಿಸತಕ್ಕ ಬೇರೆಬೇರೆ ಬಣ್ಣಗಳಲ್ಲಿ ಕಾಣಿಸತಕ್ಕ ಭಾಗದ ಜಮೀನುಗಳ ಬಗ್ಗೆ ಪೂರ್ತಿ ಮಾಹಿತಿಯನ್ನು ಅದರ ಮೂಲ ಉದ್ದೇಶದಿಂದ ಯಾವ ಉದ್ದೇಶಕ್ಕೆ ಬದಲಾಯಿಸಲಾಗಿದೆ, ಯಾವಾಗ ಬದಲಾಯಿಸಲಾಗಿದೆ, ಎಷ್ಟು ವಿಸ್ತೀರ್ಣದ ಜಾಗ ಬದಲಾಯಿಸಲಾಗಿದೆ ಎಂಬುದರ ಬಗ್ಗೆ ಆದೇಶ ಮತ್ತು ದಿನಾಂಕಗಳ ಉಲ್ಲೇಖಗಳನ್ನು ತಪ್ಪದೇ ಸಮಂಜಸವಾಗಿ ನೀಡತಕ್ಕದ್ದು.

3) ನಿರ್ಧಿಷ್ಟ ಸರ್ವೆ ನಂಬರಿನಲ್ಲಿ ಜಮೀನು ಫುಟ್ ಖರಾಬು ಬಿ ವರ್ಗೀಕರಣದ ಜಮೀನಾಗಿದ್ದಲ್ಲಿ ಅದರ ನಿರ್ಧಿಷ್ಟ ಉಪಯೋಗವನ್ನು ಬದಲಾಯಿಸಿದಲ್ಲಿ ನಿಯಮಾನುಸಾರ ಪ್ರಕ್ರಿಯೆ ಕೈಗೊಳ್ಳಲಾಗಿದೆಯೇ ಎಂಬುದನ್ನು ತಪ್ಪದೇ ಸೂಚಿಸತಕ್ಕದ್ದು.

ಸಹಿ/-
(ಎಸ್.ಎಮ್.ಜಾಮ್‌ದಾರ)
ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

(ಎಸ್.ಎ.ಮಾರ್ಗರೇಟ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ. ಮಂ).

ಗೆ:
1) ಎಲ್ಲಾ ಜಿಲ್ಲಾಧಿಕಾರಿಗಳು.
2) ಎಲ್ಲಾ ಉಪವಿಭಾಗಾಧಿಕಾರಿಗಳು.
3) ಎಲ್ಲಾ ತಹಶೀಲ್ದಾರರುಗಳು.

ನಂ:ಎಲ್‌ಎನ್‌ಡಿ(1)134:2005-06.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ: 26-07-2005.

ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.